ದಿನಾಂಕ 19-11-2024 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

: ಪಾಟೀ ಸವಾಲು : ಅರ್ಜಿದಾರ ಪರ ಶ್ರೀ.ಆರ್ ಕೆ ಕೆ ವಕೀಲರಿಂದ:

ನನ್ನ ತಂದೆ ಗೌಂಡಿ ಕೆಲಸ ಮಾಡುತ್ತಿದ್ದರು. ಅಶ್ವಿನಿ ನಗರದಲ್ಲಿರುವ ಪ್ಲಾಟನ್ನು ನನ್ನ ತಂದೆ 2008 ರಲ್ಲಿ ಖರೀದಿ ಮಾಡಿರುತ್ತಾರೆ. ನಿ ಪಿ 2 ಪ್ರಕಾರ ನನ್ನ ತಂದೆ ಖರೀದಿ ಮಾಡಿದ ಆಸ್ತಿಯು ಈಗ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ನನ್ನ ಹೆಸರಿನ ಜೊತೆಗೆ ನನ್ನ ತಮ್ಮನ ಹೆಸರೂ ಸಹ ಇದೆ. ನಮ್ಮಿಬ್ಬರ ಹೆಸರಿನಲ್ಲಿ 2018 ರಲ್ಲಿ ದಾಖಲಾಗಿದೆ. ನನ್ನ ತಂದೆಯ ವಿರುದ್ಧ ಅರ್ಜಿದಾರಳು ಹಾಕಿದ ಕೇಸು ಕ್ರಿ ಮಿ ನಂ. 2/2017 ರ ಬಗ್ಗೆ ನನಗೆ ಮಾಹಿತಿ ಇಲ್ಲ. ಆ ಕೇಸಿನಲ್ಲಿ ನನ್ನ ತಂದೆ ಹಾಜರಾಗಿ ತಕರಾರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇಸಿನಲ್ಲಿ ಕೊಡಬೇಕಾದ ಜೀವನಾಂಶವನ್ನು ತಪ್ಪಿಸಲು ನನ್ನ ತಂದೆಯ ಹೆಸರಿನಲ್ಲಿದ್ದ ಆಸ್ತಿಯನ್ನು ನಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಂಡೆವು ಎಂದರೆ ಸರಿಯಲ್ಲ. 2017 ರಲ್ಲಿ ಕೇಸು ಚಾಲ್ತಿಯಲ್ಲಿದ್ದರೂ ಸಹ ಅರ್ಜಿದಾರರಿಗೆ ಮೋಸ ಮಾಡುವ ಉದ್ದೇಶದಿಂದ ನಾವು ಆಸ್ತಿಯನ್ನು ನಮ್ಮ ಹೆಸರಿಗೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

2. ನಾನು ಮೆಕ್ಯಾನಿಕ್ ಕೆಲಸ ಮಾಡುತ್ತೇನೆ. ನಿ ಪಿ 4 ರಲ್ಲಿ ತೋರಿಸಿರುವ ಗ್ಯಾರೇಜು ನನ್ನದು ಇರುವುದಿಲ್ಲ, ನಾನು ಅಲ್ಲಿ ಕೆಲಸ ಮಾಡುತ್ತೇನೆ. ಮೇಲೆ ಹೇಳಿದ ಪ್ಲಾಟಿನಲ್ಲಿ ಆರ್ ಸಿ ಸಿ ಬಿಲ್ಡಿಂಗ್ ಇದೆ ಎಂದರೆ ಸರಿಯಲ್ಲ. ಮನೆ ಇದೆ ಎಂದರೆ ಸಾಕ್ಷಿಯು ಹಂಚಿನ ಮನೆ ಇದೆ ಎಂದು ನುಡಿಯುತ್ತಾರೆ. ಅಶ್ವಿನಿ ನಗರ ಹಾವೇರಿ ಪಟ್ಟಣದ ಜಿಲ್ಲಾ ನ್ಯಾಯಾಲಯದ ಹಿಂದುಗಡೆ ಇದದೆ ಎಂದರೆ ಸಾಕ್ಷಿಯು ದೂರ ಇದೆ ಎಂದು ನುಡಿಯುತ್ತಾರೆ. ನಮ್ಮ ಆಸ್ತಿಯ ಸುತ್ತಮುತ್ತಲೂ ಎಲ್ಲ ಕಚೇರಿಗಳು ಮತ್ತು ಮನೆಗಳು ಇವೆ ಎಂದರೆ ಸರಿಯಲ್ಲ. ನಾನು 5 ನೇ ತರಗತಿಯವರೆಗೆ ಓದಿರುತ್ತೇನೆ. ಉರ್ದು ಮಿಡಿಯಮ್ ನಲ್ಲಿ ಓದಿರುತ್ತೇನೆ. ನನಗೆ ಓದಲು ಬರುವುದಿಲ್ಲ. ನನಗೆ ಉರ್ದು ಭಾಷೆ ಓದಲು ಬರುತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 5 ನನ್ನ ತಂದೆ ಅರ್ಜಿದಾರಳೊಂದಿಗೆ ಮದುವೆಯಾದ ಬಗ್ಗೆ ಪತ್ರ ಎಂದರೆ ನನಗೆ ಗೊತ್ತಿಲ್ಲ. ನಿ ಪಿ 5 ನನಗೆ ಓದಲು ಬರುತ್ತಿದ್ದರೂ ಸಹ ಓದಲು ಬರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**3.** ನನಗೆ ಮೂರು ಜನ ಸಹೋದರಿಯರು. ಅವರ ಮದುವೆಯು **2008** ಮತ್ತು **2010** ರಲ್ಲಿ ಆಗಿದೆ. **2008** ರಲ್ಲಿ ನನಗೆ **15** ವರ್ಷ ಇತ್ತು. ನನ್ನ ತಂದೆ ನಮ್ಮ ಮನೆಯಲ್ಲಿಯೇ ಇದ್ದಾರೆ. ಹುಟ್ಟಿದಾಗಿನಿಂದ ನನ್ನ ಬಳಿ ಇದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಡುವೆ ಬಿಟ್ಟು ಹೋಗಿದ್ದರು, ಪ್ಯಾರಾಲಿಸಿಸ್ ಆದ ಮೇಲೆ ನಾನು ಸಾಕುತ್ತಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಅರ್ಜಿದಾರಳು ಹಾಕಿದ ಕೇಸಿನಲ್ಲಿ ತಕರಾರು ಹಾಕಿದ ವಿಷಯ ಗೊತ್ತಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರಳು ಮತ್ತು ನನ್ನ ತಂದೆಯ ಮಧ್ಯ ರಾಜೀ ಮಾಡಿಸಲು ಇಂದಿರಾ ನಗರ ಸುನ್ನಿ ಜಮಾತ ಮತ್ತು ಹಾವೇರಿಯ ಜಮಾತಿನವರು ಪ್ರಯತ್ನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿ ಪಿ **1** ರ ಪ್ರಕಾರ ಅರ್ಜಿದಾರಳ ಗಂಡನ ಹೆಸರು ನನ್ನ ತಂದೆಯ ಹೆಸರು ಎಂದರೆ ನನಗೆ ಗೊತ್ತಿಲ್ಲ. ನಿ ಪಿ **1** ರ ಪ್ರಕಾರ ರಿ ಸ ನಂ. **164,** ಪ್ಲಾಟ್ ನಂ.**33,** ಅಶ್ವಿನಿ ನಗರ ಅಂತಾ ಇದೆ ಎಂದರೆ ಸರಿಯಲ್ಲ. ಅರ್ಜಿದಾರಳ ಮತ್ತು ನನ್ನ ತಂದೆಯ ಮದುವೆಯಾಗಿರುವ ವಿಷಯ ನಮಗೆ ಗೊತ್ತಿದೆ ಎಂದರೆ ಸರಿಯಲ್ಲ. ಅರ್ಜಿದಾರಳು ನಮ್ಮನ್ನು ಸಾಕಿ ಸಲುಹಿ ಜೋಪಾನ ಮಾಡಿದ್ದಾಳೆ ಎಂದರೆ ಸರಿಯಲ್ಲ. ಅರ್ಜಿದಾರಳೇ ನಮ್ಮ ಅಕ್ಕ ತಂಗಿಯರ ಬಾಣಂತನ ಮಾಡಿದ್ದಾಳೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ತಾಯಿ ಜೀವಂತ ಇದ್ದಾಗ ಮದುವೆ ಮತ್ತು ಬಾಣಂತನ ಆಗಿರುತ್ತವೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಮದುವೆಯು ಅರ್ಜಿದಾರಳೊಂದಿಗೆ ಮುಸ್ಲಿಂ ಸಮಾಜದ ಸಂಪ್ರದಾಯದ ಪ್ರಕಾರ ಆಗಿದೆ ಎಂದರೆ ಸರಿಯಲ್ಲ. ನಿ ಪಿ **5** ರ ಪ್ರಕಾರ ನನ್ನ ತಂದೆಯ ಮದುವೆ ಅರ್ಜಿದಾರಳೊಂದಿಗೆ ಆಗಿದೆ ಎಂದರೆ ಸರಿಯಲ್ಲ. ನಿ ಪಿ **5** ರ ಪ್ರಕಾರ ಸಮಾಜದವರು ಮದುವೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಕ್ರಿ.ಮಿ.ನಂ.**2/2017** ರ ಪ್ರಕಾರ ಅರ್ಜಿದಾರಳು ಕಾನೂನು ಬದ್ಧ ಹೆಂಡತಿಯಾಗಿದ್ದರಿಂದ ಜೀವನಾಂಶ ಕೊಡಬೇಕು ಎಂದು ಆದೇಶವಾಗಿದೆ ಎಂದರೆ ಸರಿಯಲ್ಲ.

**4.** ನನ್ನ ತಮ್ಮ ಕೂಲಿ ಕೆಲಸ ಮಾಡುತ್ತಾನೆ. ಅರ್ಜಿದಾರಳು ನಮ್ಮ ತಾಯಿಯಾಗಿದ್ದರಿಂದ ನಾನು, ನನ್ನ ಸಹೋದರ ಅರ್ಜಿದಾರಳಿಗೆ ಜೀವನಾಂಶ ಕೊಡಲು ಬಾಧ್ಯಸ್ಥರಾಗಿರುತ್ತೇವೆ ಎಂದರೆ ಸರಿಯಲ್ಲ. **2016** ನೇ ಇಸ್ವಿಯಲ್ಲಿಯೇ ನಮ್ಮ ತಂದೆ ನಮ್ಮನ್ನು ಬಿಟ್ಟು ಹೋಗಿದರು. ಎಲ್ಲಿ ಇದ್ದರು ಎಂದು ಗೊತ್ತಿರಲಿಲ್ಲ. ಆ ಕುರಿತು ನಾವು ಫಿರ್ಯಾದಿ ಸಲ್ಲಿಸಿರುವುದಿಲ್ಲ. ನಾವು ನಮ್ಮ ಸಂಬಂಧಿಕರ ಮನೆಯಲ್ಲಿ

ಹುಡುಕಾಡಿರುತ್ತೇವೆ. ನಮ್ಮ ತಂದೆ 3 ವರ್ಷ ಹೋಗಿದ್ದರು. ಅವರು ಬಿಟ್ಟು ಹೋದಾಗ ಹುಡುಕಿಸಲು ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳಲು ತೊಂದರೆ ಇರಲಿಲ್ಲ. ಅರ್ಜಿದಾರಳಿಗೆ ಜೀವನಾಂಶ ಕೊಡುವುದನ್ನು ತಪ್ಪಿಸಿಕೊಳ್ಳಲು ನಮ್ಮ ತಂದೆ ನಮ್ಮನ್ನು ಬಿಟ್ಟು ಹೋಗಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಂಬಂಧಿಕರು ನಮ್ಮ ತಂದೆಗೆ ಪಾರ್ಶ್ವವಾಯು ಆಗಿರುವ ವಿಷಯ ತಿಳಿಸಿದ್ದರು. ಅವರು ಆಗ ಕೆ ಎಮ್ ಸಿ ಆಸ್ಪತ್ರೆಯಲ್ಲಿದ್ದರು. ಸಾದಿಕ್ ಎನ್ನುವ ನಮ್ಮ ಸಂಬಂಧಿಕ ಹೇಳಿರುತ್ತಾನೆ. ಯಾವ ತಾರೀಖಿನಂದು ಕೆ ಎಮ್ ಸಿ ಆಸ್ಪತ್ರೆಗೆ ಹೋಗಿ ಕರೆದುಕೊಂಡು ಬಂದಿರುತ್ತೇನೆ ಎಂದು ನೆನಪಿಲ್ಲ. ಕೆ ಎಮ್ ಸಿ ಯಿಂದ ನಾನೇ ನನ್ನ ತಂದೆಯನ್ನು ಕರೆದುಕೊಂಡು ಬಂದಿರುತ್ತೇನೆ. ಕೆ ಎಮ್ ಸಿ ಯಿಂದ ಡಿಸ್‌ಚಾರ್ಜ ಆದ ಬಗ್ಗೆ ದಾಖಲಾತಿ ಇದೆ, ಬೇಕಾದರೆ ಹಾಜರುಪಡಿಸುತ್ತೇನೆ. ಈಗ ನನ್ನ ತಂದೆ ಮಾತನಾಡುವ ಸ್ಥಿತಿಯಲ್ಲಿ ಇಲ್ಲ. ಸಾದಿಕ್ ಈತನಿಗೂ ಸಹ ನನ್ನ ತಂದೆಯನ್ನು ಯಾರು ಆಸ್ಪತ್ರೆಗೆ ದಾಖಲಿಸಿದ್ದರು ಎಂದು ಗೊತ್ತಿಲ್ಲ. ಸಾದಿಕ್ ಈತನನ್ನು ನಾನು ಈ ವಿಷಯವಾಗಿ ಕೇಳಿಲ್ಲ. ಮೂರು ವರ್ಷ ಅವಧಿಯಲ್ಲಿ ನನ್ನ ತಂದೆ ನ್ಯಾಯಾಲಯಕ್ಕೆ ಹಾಜರಾಗಿ ಜೀವನಾಂಶ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಹಾಜರಾಗಿ ಜೀವನಾಂಶ ಕೊಟ್ಟಿದ್ದರೂ ಸಹ ಗೊತ್ತಿಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**5.** ಹಾನಗಲ್ ತಾಲೂಕಿನ ಹಸನಾಬಾದಿ ಗ್ರಾಮದಲ್ಲಿ ನಮ್ಮ ಅಕ್ಕ ಇರುತ್ತಾಳೆ. ಹಸನಾಬಾದಿಯಲ್ಲಿ ನನ್ನ ಅಕ್ಕನ ಮಾವ ನನ್ನ ತಂದೆಯನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬರುತ್ತಿದ್ದರು ಎಂದರೆ ಗೊತ್ತಿಲ್ಲ. ಮೇಲೆ ಹೇಳಿದ ಆಸ್ತಿಯನ್ನು ನನ್ನ ತಂದೆ ಮೇಸ್ತ್ರಿ ಕೆಲಸ ಮಾಡಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. 2005 ಮತ್ತು 2006 ರಲ್ಲಿ ನನಗೆ 12 ವರ್ಷ ವಯಸ್ಸು ಇತ್ತು. ಆಗ ನಾನು ಶಾಲೆಗೆ ಹೋಗುತ್ತಿದ್ದೆ ಎಂದರೆ ಸರಿ. ಆಗ ನನ್ನ ತಂದೆ ಗೌಂಡಿ ಕೆಲಸ ಮಾಡುತ್ತಿದ್ದರು. ನಾನು ಆಗ ಅಲ್ಪವಯಿ ಇದ್ದೆ ಎಂದರೆ ಸರಿ. ಆಗ ಈ ಆಸ್ತಿ ಖರೀದಿ ಮಾಡಿದ್ದಾರೆ ಎಂದರೆ ಸರಿ. ನನ್ನ ತಂದೆ ಖರೀದಿ ಮಾಡಿದ ಆಸ್ತಿಯಲ್ಲಿ ನಾವು ವಾಸ ಮಾಡುತ್ತಿರುವುದರಿಂದ ಅರ್ಜಿದಾರಳಿಗೆ ಜೀವನಾಂಶ ಕೊಡಲು ಬಾಧ್ಯಸ್ಥರಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಅರ್ಜಿದಾರಳು ಯಾರು ಎಂದು ಗೊತ್ತಿಲ್ಲ ಅಂತಾ ನುಡಿಯುತ್ತಾರೆ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್